ಭಾರತದ ವಾಯುಪಡೆಗೆ 2022ರ ಅಕ್ಟೋಬರ್ 3 ಮಹತ್ವದ ದಿನ. ಅಂದು, ಭಾರತದ ದೇಶೀಯ ವಿನ್ಯಾಸದ ಎರಡನೇ ಮಿಲಿಟರಿ ಹೆಲಿಕಾಪ್ಟರ್ ಮತ್ತು ಮೊಟ್ಟ ಮೊದಲ ಯುದ್ಧದ ಹೆಲಿಕಾಪ್ಟರ್ 'ಪ್ರಚಂಡ' (ಲೈಟ್ ಕಾಂಬಾಟ್ ಹೆಲಿಕಾಪ್ಟರ್ – ಎಲ್.ಸಿ.ಎಚ್.) ವಾಯುಪಡೆಗೆ ಅಧಿಕೃತವಾಗಿ ಸೇರ್ಪಡೆಯಾಯಿತು; ಆ ಮೂಲಕ, ವಿಶ್ವದ ವಾಯುಯಾನದ ನಕಾಶೆಯಲ್ಲಿ ಭಾರತಕ್ಕೆ ಹೆಮ್ಮೆಯ ಸ್ಥಾನವನ್ನು ಗಳಿಸಿಕೊಟ್ಟಿತು.

ಸಿಯಾಚಿನ್‌ನಂತಹ ಅತಿ ಎತ್ತರದ ಪರ್ವತ ಪ್ರದೇಶದಲ್ಲಿ, 5000 ಮೀಟರ್ ಎತ್ತರದಲ್ಲಿಯೂ ಅಸ್ತ್ರಶಸ್ತ್ರಗಳ ಭಾರವನ್ನು ಹೊತ್ತು, ಹಾರಿ–ಇಳಿಯಬಲ್ಲ ಸಾಮರ್ಥ್ಯವುಳ್ಳ ಜಗತ್ತಿನ ಏಕೈಕ ಯುದ್ಧದ ಹೆಲಿಕಾಪ್ಟರ್ 'ಪ್ರಚಂಡ'!

ಇದೇ ವರ್ಷದ ಜೂನ್ ತಿಂಗಳಲ್ಲಿ, ಈ 'ಹಗುರ ಯುದ್ಧದ ಹೆಲಿಕಾಪ್ಟರ್' ಭೂಪಡೆಗೆ ಸೇರ್ಪಡೆಯಾಗಿತ್ತು. 2020ರಲ್ಲಿಯೇ ಈ ಹೆಲಿಕಾಪ್ಟರ್ ಸರಹದ್ದಿನ 'ಎಲ್.ಎ.ಸಿ.' ಬಳಿ ತನ್ನ ಸಾಮರ್ಥ್ಯದ 'ಲೈವ್' ಪ್ರದರ್ಶನ ನೀಡಿತ್ತು. ಇದೀಗ ಜೋಧ್‌ಪುರದಲ್ಲಿ 'ಪ್ರಚಂಡ' ಎಂದು ನಾಮಕರಣಗೊಂಡು ವಾಯುಪಡೆಗೆ ಅಧಿಕೃತವಾಗಿ ಸೇರ್ಪಡೆಯಾಗಿದೆ. ಈ ಸಂದರ್ಭದಲ್ಲಿ ರಕ್ಷಣಾ ಸಚಿವರಾದ ರಾಜನಾಥ್ ಸಿಂಗ್ 'ಪ್ರಚಂಡ್ ಶಕ್ತಿ, ಪ್ರಚಂಡ್ ವೇಗ್, ಪ್ರಚಂಡ್ ಪ್ರಹಾರ್ ಕಿ ಕ್ಷಮತಾವಾಲೆ ಹೆಲಿಕಾಪ್ಟರ್' ಎಂದು ಪ್ರಶಂಸೆ ಮಾಡಿದ್ದು, 'ವಾಯುಪಡೆಯ ಸಾಮರ್ಥ್ಯವನ್ನು ವರ್ಧಿಸುವ ಪ್ರಚಂಡ ಹೆಲಿಕಾಪ್ಟರ್ ಭಾರತದ ರಕ್ಷಣಾ ಕ್ಷೇತ್ರದಲ್ಲಿ ಆತ್ಮನಿರ್ಭರತೆಯತ್ತ ಇಟ್ಟ ದೊಡ್ಡ ಹೆಜ್ಜೆ' ಎಂದು ಹೇಳಿರುವುದು ಉತ್ಪ್ರೇಕ್ಷೆಯಲ್ಲ. ಜಗತ್ತಿನ ಅತಿ ಎತ್ತರದ ರಣಭೂಮಿ ಭಾರತದಲ್ಲಿದೆ. ಪರ್ವತ



ಕನ್ನಡದ ನೆಲದಲ್ಲಿ ವಿಮಾನ ಕಾರ್ಖಾನೆ ಸ್ಥಾಪಿತವಾಗಲು ಕಾರಣರಾದ ವಾಲ್‌ಚಂದ್ ಹೀರಾಚಂದ್

